ಕೊಟ್ಟಿದ್ದೇವೆ. ಮಾನ್ಯ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಕೆಲವು ಕಡೆ ರೈತರಿಗೆ ಹತ್ತಿ ಬೀಜ ಸಿಗುವುದಿಲ್ಲ ಎನ್ನುವ ಸಂಶಯ ಬಂದಿದೆ. ಎಷ್ಟು ಸಾಧ್ಯವೋ ಅಷ್ಟು ಒದಗಿಸಲಿಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಈ ಹತ್ತಿ ಬೀಜದ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗಬಹುದು ಎನ್ನುವ ವಿಶ್ವಾಸ ನನಗೆ ಇದೆ.

ಅಧ್ಯಕ್ಷರು.— ಮಾನ್ಯ ವೆಂಕಟರಾಮಯ್ಯನವರೇ, ಕಾಲಿಂಗ್ ಅಟೆನ್‌ಷನ್ ಕೇಳಿ.

ಶ್ರೀ ಡಿ. ಟಿ. ಜಯಕೂಮಾರ್.— ಮಾನ್ಯ ಅಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ.

ಅಧ್ಯಕ್ಷರು.— ಮಂತ್ರಿಗಳು ಸಮರ್ಪಕವಾಗಿ, ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದಾರೆ. ಈಗ ನಿಮಗೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್.— ರೈತರ ಬಗ್ಗೆ ಇಷ್ಟೊಂದು ನಿರಾಕರಣೆ ಮಾಡಿದರೆ ಹೇಗೆ?

ಅಧ್ಯಕ್ಷರು.— ಆಗುವುದಿಲ್ಲ.

ಶ್ರೀ ಡಿ.ಟಿ. ಜಯಕುಮಾರ್.— ನೀವೂ ಕೂಡ ರೈತರು ಅನುಭವವಿದೆ.

ಅಧ್ಯಕ್ಷರು.— ನಿಮಗಿಂತ ನನಗೆ ಹೆಚ್ಚು ಗೊತ್ತಿದೆ. ಮಂತ್ರಿಗಳು ಸ್ಪಷ್ಟವಾಗಿ ಸಮರ್ಪಕವಾಗಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಡಿ. ಟಿ. ಜಯಕುಮಾರ್.— ಅವರಿಗೆ ಅಂದರೆ ಆಪೊಸಿಷನ್‌ನವರಿಗೆ ಒಂದೊಂದು ಗಂಟೆ ಕೊಡುತ್ತೀರಿ ಒಂದೊಂದು ಕ್ವೆಶ್ಚನ್‌ಗೆ.

ಅಧ್ಯಕ್ಷರು.— ಈ ರೀತಿ ಬೇಜವಾಬ್ದಾರಿಯಿಂದ ಮಾತನಾಡಬೇಡಿ. ಅವರು ಇವರು ಎಂದರ ಹೇಳಬೇಡಿ, ನನಗೆ ಎಲ್ಲರೂ ಒಂದೇ. ಈ ರೀತಿ ಮಾತನಾಡಬೇಡಿ.

ಶ್ರೀ ಡಿ.ಟಿ. ಜಯಕುಮಾರ್.— ಅವರಿಗೆ ಕೊಟ್ಟಿದ್ದೀರಿ. ಇವರಿಗೆ ಕೊಟ್ಟಿದ್ದೀರಿ

ಅಧ್ಯಕ್ಷರು.— ಯಾರಿಗೂ ಕೊಟ್ಟಿಲ್ಲ. ಕುಳಿತುಕೊಳ್ಳಿ. ಮಾನ್ಯ ವೆಂಕಟರಾಮಯ್ಯನವರೆ ನೀವು ಕೇಳಿ.

ನಿಯಮ ೩೩ಳಿರ ಮೇರೆಗೆ

೧. ಕೆ. ಪಿ. ಎಸ್. ಸಿ. ಯಿಂದ ನಡೆದ ದರ್ಜೆ ೧ ಮತ್ತು ೨ರ ಪರೀಕ್ಷಾ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗಿರುವುದರ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೆ.ಪಿ.ಎಸ್.ಸಿ. ಇತ್ತೀಚೆಗೆ ನಡೆಸಿದ ಕ್ಲಾಸ್ ಒಂದು ಮತ್ತು ಎರಡರ ಪ್ರಶ್ನೆ ಪತ್ರಿಕೆಗಳು ಬಹಿರಂಗವಾದ ವಿಚಾರ ದಿನ ಪತ್ರಿಕೆಗಳಲ್ಲಿ ಬಂದಿದ್ದದನ್ನು ಸ್ಮರಿಸುತ್ತಾ ಆ ರೀತಿಯಲ್ಲಿ ಬಹಿರಂಗವಾದ ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಬರೆದು ಪರೀಕ್ಷೆಯಲ್ಲಿ ಪಾಸಾಗಿ ಉನ್ನತ ಅಧಿಕಾರಕ್ಕೆ ಬರುವ ಅಧಿಕಾರಿಗಳಿಂದ ಸರ್ಕಾರ ಎಂತಹ ಸೇವೆಯನ್ನು ನಿರೀಕ್ಷಿಸಬಹುದು ಹಾಗೂ ಕ್ರಮವಾಗಿ ನ್ಯಾಯಬದ್ಧವಾಗಿ ಓದಿ ಬರೆದಿರುವವರಿಗೆ ಅನ್ಯಾಯವಾಗಿದೆ ಕಳಪೆ ಅಧಿಕಾರಿಗಳು ಸೇವೆಗೆ ಬರುವುದರಿಂದ ರಾಜ್ಯದ ಆಡಳಿತ ಕೆಟ್ಟು ಹೋಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತದೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಕೆ.ಪಿ.ಎಸ್.ಸಿ. ನಡೆಸಿದ ಪರೀಕ್ಷೆಯನ್ನು ರದ್ದುಪಡಿಸಿ ಮರು ಪರೀಕ್ಷೆ ನಡೆಸುವುದು ಸೂಕ್ತವಾದ್ದರಿಂದ ಇದು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತು ವಿಷಯವಾದ್ದರಿಂದ ಸದನದ ಪಂಚಂಡೆ ಚರ್ಚೆಗೆ ತರಬಯಸುತ್ತೇನೆ.

ಶ್ರೀ ಜೀವರಾಜ ಆಳ್ವ.— ಮಾನ್ಯ ಸದಸ್ಯರು ಈ ವಿಷಯದ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಇದರ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.— ಸ್ಟೇಟ್‌ಮೆಂಟ್ ಕೊಡಿ. ಈ ವಿಷಯಕ್ಕೂ ಜೀವರಾಜ ಆಳ್ವರವರಿಗೂ ಸಂಬಂಧವಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲೇ ಇದ್ದಾರೆ ಅವರು ಹೇಳಲಿ.

ಶ್ರೀ ಜೀವರಾಜ ಆಳ್ವ.--ಅವರ ಪರವಾಗಿ ಹೇಳಿದ್ದೇನೆ.

ಶ್ರೀ ಆರ್. ವೆಂಕಟರಾವಂಯ್ಯ.--ಇವರೇನು ಆಕ್ಟಿಂಗ್ ಚೀಫ್ ಮಿನಿಸ್ಟರೇ? ಚೀಫ್ ಮಿನಿಸ್ಟರ್ ಏನು ಬೇಕಾದರೂ ಹೇಳಲಿ. ಇದಕ್ಕೂ ಮಾನ್ಯ ಜೀವರಾಜ ಆಳ್ವರವರಿಗೂ ಸಂಬಂಧವಿಲ್ಲ. ಚೀಫ್ ಮಿನಿಸ್ಟರ್ ಏನಾದರೂ ಆಥರೈಸೇಷನ್ ಕೊಟ್ಟಿದ್ದೇನೆ ಎಂದು ಹೇಳಲಿ, ಒಪ್ಪಿಕೊಳ್ಳುತ್ತೇನೆ.

ಶ್ರೀ ಜೀವರಾಜ ಆಳ್ವ (ಮಾನ್ಯ ಮುಖ್ಯ ಮಂತ್ರಿಯವರ ಪರವಾಗಿ).--ಮಾನ್ಯ ಅಧ್ಯಕ್ಷರೇ, ದಿನಾಂಕ ೨೬-೧೨-೧೯೮೭ ರಿಂದ ೧೮-೧-೧೯೮೮ರ ವರೆಗೆ ಕರ್ನಾಟಕ ಲೋಕಸೇವಾ ಆಯೋಗವು ಗೆಜೆಟೆಡ್ ಪ್ರೊಬೇಷನರ್ ಪರೀಕ್ಷೆಗಳನ್ನು ನಡೆಸಿತ್ತು. ಈ ಪರೀಕ್ಷೆಗಳನ್ನು ಶಿಕ್ಷಣ ಇಲಾಖೆಯ ಜಂಟಿ ಉಪ ನಿರ್ದೇಶಕರ ಸಹಾಯ ಮತ್ತು ಸಹಕಾರಗಳಿಂದ ಹಾಗೂ ಅವರ ಸಮಗ್ರ ಉಸ್ತುವಾರಿಯಲ್ಲಿ ನಡೆಸಲಾಯಿತು. ರಾಜ್ಯದ ಒಟ್ಟು ೮೬ ಪರೀಕ್ಷಾ ಕೇಂದ್ರಗಳಲ್ಲಿ ೨೯,೫೦೦ ಅಭ್ಯರ್ಥಿಗಳು ಪರೀಕ್ಷೆಗೆ ಕುಳಿತಿದ್ದರು.

೨. ಪ್ರಶ್ನೆ ಪತ್ರಿಕೆಗಳನ್ನು ವಿವಿಧ ಪರೀಕ್ಷೆ ಕೇಂದ್ರಕ್ಕೆ ಕಳುಹಿಸಿಕೊಡಲು ಮತ್ತು ಪ್ರಶ್ನೆ ಪತ್ರಿಕೆಗಳ ಗೌಪ್ಯತೆಯನ್ನು ಕಾಯ್ದುಕೊಳ್ಳುವುದಕ್ಕಾಗಿ ಈಬಾರಿ ಪ್ರಥಮತಃ ಯೂನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ ಅವರು ಹಾಕಕೊಂಡಿರುವ ವಿಧಾನವನ್ನೇ ಅನುಸರಿಸಲಾಯಿತು. ಈ ವಿಧಾನದಲ್ಲಿ ಪ್ರಶ್ನೆ ಪತ್ರಿಕೆಗಳು ಬಹಿರಂಗ ಆಗುವ ಸಾಧ್ಯತೆ ಇರುವುದಿಲ್ಲ. ಏಕೆಂದರೆ ಸೀಲ್ ಮಾಡಿದ ಪ್ರಶ್ನೆ ಪತ್ರಿಕೆಗಳ ಪ್ಯಾಕೇಟುಗಳನ್ನು ಸೂಪರ್‌ವೈಸರ್‌ಗಳು ಸೀಲ್ ಒಡೆಯದೇ ಪರೀಕ್ಷಾ ಕೊಠಡಿಯ ಇನ್‌ವಿಜಿಲೇಟರ್‌ಗಳಿಗೆ ಪರೀಕ್ಷೆ ಪ್ರಾರಂಭವಾಗುವುದಕ್ಕಿಂತ ಎರಡು ನಿಮಿಷಗಳ ಮೊದಲು ಮಾತ್ರ ಕೊಡುತ್ತಾರೆ.

೩. ಲೋಕಸೇವಾ ಆಯೋಗದ ಎಲ್ಲಾ ಸದಸ್ಯರುಗಳೂ ಹೆಚ್ಚು ಕಡಿಮೆ ಎಲ್ಲಾ ಪರೀಕ್ಷಾ ಕೇಂದ್ರಗಳಿಗೂ ಭೇಟಿ ಕೊಡುತ್ತಿದ್ದರು. ಆ ಸಮಯದಲ್ಲಿ ಅಭ್ಯರ್ಥಿಗಳಿಂದ ಮಾಸ್ ಕಾಪಿ ಆದ ಬಗ್ಗೆ ಸದಸ್ಯರುಗಳಿಗೆ ದೂರು ಬರಲಿಲ್ಲ.

೪. ಒಟ್ಟು ಹತ್ತು ದುರ್ವ್ಯವಹಾರದ ಪ್ರಕರಣಗಳು ಲೋಕಸೇವಾ ಆಯೋಗಕ್ಕೆ ವರದಿಯಾಗಿದೆ ಅವುಗಳಲ್ಲಿ ಒಂದು ಪ್ರಕರಣ ಪೋಲೀಸ್ ತನಿಖೆಯಲ್ಲಿದೆ. ಇನ್ನುಳಿದ ಒಂಭತ್ತು ಪ್ರಕರಣಗಳಲ್ಲಿ ಲೋಕಸೇವಾ ಆಯೋಗವೇ ವಿಚಾರಣೆ ನಡೆಸುತ್ತಿದೆ. ಪರೀಕ್ಷೆಗೆ ಮೊದಲು ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗಿರುವುದು ಹಾಗೂ ಮಾಸ್ ಕಾಪಿ ಆಗಿರುವುದು ಮಾತ್ರ ಸತ್ಯಕ್ಕೆ ದೂರವಾದುದು.

೨. ಉತ್ತರ ಕನ್ನಡ ಜಿಲ್ಲೆಗೆ ರಿಯಾಯಿತಿ ದರದಲ್ಲಿ ಸೀಮೆಎಣ್ಣೆಯನ್ನು ಒದಗಿಸುವುದರ ಬಗ್ಗೆ

ಶ್ರೀ ವಸಂತ ವಿ, ಸಾಲಿಯಾನ (ಕಾಪು).--ಮಾನ್ಯ ಅಧ್ಯಕ್ಷರೇ, ವಿದ್ಯುಚ್ಛಕ್ತಿ ಇಲ್ಲದ ಊರುಗಳಲ್ಲಿ ವಿದ್ಯುತ್ ಸೌಕರ್ಯ ಇದ್ದರೂ ನಿರಂತರ 'ಪವರ್ ಕಟ್' ಇರುವ ಕಡೆಗಳಲ್ಲಿ ರೈತರು ಸೀಮೆ ಎಣ್ಣೆಯ ಪಂಪ್‌ಸೆಟ್ಟುಗಳನ್ನು ಹೆಚ್ಚಾಗಿ ಬಳಸುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದರ ಬಳಕೆ ವ್ಯಾಪಕವಾಗಿದ್ದು, ಸೀಮೆಎಣ್ಣೆ ಪರ್ಮಿಟ್ ಪಡೆಯಲು ರೈತರು, ಗ್ರಾಮಲೆಕ್ಕಿಗರ ಕಂದಾಯ ನಿರೀಕ್ಷಕರ ಶಿಫಾರಸಿನೊಂದಿಗೆ ತಾಲ್ಲೂಕು ಕೇಂದ್ರಕ್ಕೆ ಹೋಗಿ ತಹಸೀಲ್ದಾರನ್ನು ಕಾಣಬೇಕು. ಅನೇಕ ಬಾರಿ ಅಲೆದಾಡಬೇಕು. ಅದಕ್ಕಾಗಿ ಕಾಲವ್ಯಯ, ಹಣ ವ್ಯಯವೂ ಆಗುತ್ತದೆ. ಕಾರಣ, ಈ ವ್ಯಯಗಳನ್ನು ತಪ್ಪಿಸಿ, ಬೆಳೆ ಉಳಿಸಬೇಕಾದರೆ ರೈತನಿಗೆ ಇನ್ನೊಂದೇ ದಾರಿ ಭ್ರಷ್ಟಾಚಾರಕ್ಕೆ ಆಶ್ರಯ. ಇದನ್ನು ನಿವಾರಿಸಲು ಪರ್ಮಿಟ್‌ಗಳನ್ನು ಮಂಡಲ ಪಂಚಾಯಿತಿ ಮಟ್ಟದಲ್ಲಿ ನೀಡುವ ವ್ಯವಸ್ಥೆ ಆಗಬೇಕು. ರೈತರಿಗೆ ನೆರವು ನೀಡಬೇಕಾದ ಸರ್ಕಾರ, ದಿನಬಳಕೆಯ ಸೀಮೆ ಎಣ್ಣೆ ದರಕ್ಕಿಂತ ಪಂಪುಸೆಟ್ಟಿಗೆ ಬಳಸುವ ಸೀಮೆ ಎಣ್ಣೆಗೆ ಅಧಿಕ ದರ ವಿಧಿಸಿದೆ ನ್ಯಾಯವಾಗಿ ರಿಯಾಯಿತಿ ದರದಲ್ಲಿ ಸೀಮೆ ಎಣ್ಣೆ ಪೂರೈಸಬೇಕು. ಆದಾಗದಿದ್ದಲ್ಲಿ ದಿನ ಬಳಕೆ ದರದಲಾದರೂ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) --ಮಾನ್ಯ ಅಧ್ಯಕ್ಷರೇ, ರೈತರಿಗೆ ಪಂಪ್‌ಸೆಟ್ಟುಗಳಿಗೆ ಉಪಯೋಗಿಸುವ ಸೀಮೆ ಎಣ್ಣೆಗೆ ಪರ್ಮಿಟ್‌ನ್ನು ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ನೀಡುವ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದುಕೊಳ್ಳು